**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**:10/2025

ಡಬ್ಲ್ಯೂ.ಡಬ್ಲ್ಯೂ-1

**ದಿನಾಂಕ 27.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ವಕೀಲರಿಂದಃ**

ನಾನು ಐ.ಟಿ.ಐ. ನಲ್ಲಿ Electrician ಆಗಿ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆ ಅಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ದಿನಾಂಕಃ11.08.2014 ರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ನೇಮಕಾತಿಗೊಂಡಿದ್ದ ಬಗ್ಗೆ ನೇಮಕಾತಿ ದಾಖಲೆಯನ್ನು ಹಾಜರು ಮಾಡಿಲ್ಲ. ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು ಕಾಲ್ ಮಾಡಿದ್ದರು ಅಲ್ಲಿಗೆ ನಾನು ಅರ್ಜಿ ಸಲ್ಲಿಸಿದ್ದೆ. ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು ಗುತ್ತಿಗೆದಾರರು ಆಗಿರುತ್ತಾರೆ. ಸದರಿ ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು ಕರೆ ಮಾಡಿ ನಾನು ಅರ್ಜಿ ಸಲ್ಲಿಸಿ ನಂತರ ನನ್ನನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು ನನ್ನನ್ನು ಕೆಲಸಕ್ಕೆ ತೆಗೆದುಕೊಂಡಿದ್ದ ಸಮಯದಲ್ಲಿ 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡಿತ್ತಿದ್ದೆ. ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ಇದ್ದಿದ್ದ ಕಾರಣ ನನ್ನನ್ನು ಅಲ್ಲಿಗೆ ನಿಯೋಜನೆ ಮಾಡಿದ್ದರು ಎಂದರೆ ಹೌದು. ನನಗೆ ವೇತನವನ್ನು ಪಿ.ಎಸ್. ಎಲೆಕ್ಟ್ರಿಕಲ್ಸ್ ರವರು ಕೊಡುತ್ತಿದ್ದರು. ನನ್ನನ್ನು ನಿಯಂತ್ರಣ ಮಾಡುತ್ತಿದ್ದವರು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯವರು. 2 ನೇ ಪಕ್ಷಗಾರರ ಸಂಖ್ಯೆ-1 ಮತ್ತು 2 ರವರ ನಡುವೆ ಆಗಿದ್ದ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ.

ನಾವು ಒಟ್ಟಾಗಿ 4 ಜನರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಕಡೆಯಿಂದ ಕೆಲಸ ಮಾಡುತ್ತಿದ್ದೆವು.

2 ನೇ ಪಕ್ಷಗಾರರ ಸಂಖ್ಯೆ-2 ರವರು Electrical contractors ರವರು ಸಂಸ್ಥೆಗಳಲ್ಲಿ ಕೆಲಸವನ್ನು ತೆಗೆದುಕೊಂಡು ಕೆಲಸಗಳನ್ನು ಮಾಡಿಸಿಕೊಡುತ್ತಿದ್ದರು ಎಂದರೆ ಹೌದು ಸಾಕ್ಷಿ ಮುಂದುವರೆದು ನಿರ್ದೇಶನವನ್ನು ಸಂಸ್ಥೆಯವರು ಕೊಡುತ್ತಿದ್ದರು ಎನ್ನುತ್ತಾರೆ. ಸಂಸ್ಥೆಯವರು ಯಾವ ರೀತಿ ಕೆಲಸವನ್ನು ಮಾಡಬೇಕು ಎಂಬುದನ್ನು ಗುತ್ತಿಗೆದಾರರಿಗೆ ತಿಳಿಸಿದ ಮೇಲೆ ಗುತ್ತಿಗೆದಾರರು ನಮಗೆ ಆ ಕೆಲಸಗಳನ್ನು ಹೇಳಿ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ 2 ನೇ ಪಕ್ಷಗಾರರ ಸಂಖ್ಯೆ-1 ರವರು ವೇತನ, ಇ.ಎಸ್.ಐ. ಸೌಲಭ್ಯಗಳನ್ನು ಎಂದೂ ನೀಡಿಲ್ಲ ಎಂದರೆ ಹೌದು. 2 ನೇ ಪಕ್ಷಗಾರರ ಸಂಖ್ಯೆ-2 ರವರು Nestle and Hitachi ಎಂಬ ಸಂಸ್ಥೆಗಳಲ್ಲಿ ಕೆಲಸ ಮಾಡಿಸುತ್ತಿದ್ದರು. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ ಕಾರ್ಮಿಕರು Nestle and Hitachi ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಪಕ್ಷಗಾರರ ಸಂಖ್ಯೆ-2 ರವರ ನನ್ನನ್ನು Hitachi ಸಂಸ್ಥೆಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-3 ರ ದಾಖಲೆ ಪ್ರಕಾರ ನನ್ನನ್ನು Hitachi ಸಂಸ್ಥೆಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿ. ನಾನು Nestle ಸಂಸ್ಥೆಯಲ್ಲಿ ಹಠಾತ್ತನೆ ಕೆಲಸ ನಿಲ್ಲಿಸಿದ್ದ ಕಾರಣ ನಿ.ಡಬ್ಲ್ಯೂ-5 ರಂತೆ ನನಗೆ ಪತ್ರ ನಿಡಿದ್ದರು ಎಂದರೆ ಸರಿ. ನಾನು ಈಗ ಎಲ್ಲೂ ಕೆಲಸ ಮಾಡುತ್ತಿಲ್ಲ. Electricians ಈಗ ತುಂಬ ಬೇಡಿಕೆ ಇರುತ್ತದೆ ಎಂದರೆ ಹೌದು. Electricians ಗಳು ಕಂಪನಿಗಳಲ್ಲಿ, ಗುತ್ತಿಗೆ ಆಧಾರದ ಮೇಲೆ ಹಾಗೂ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಬಹುದಾಗಿರುತ್ತದೆ ಎಂದರೆ ಹೌದು. ಅವರ ಅನುಭವದ ಮೇಲೆ ಬೇಡಿಕೆ ಹೆಚ್ಚಾಗುತ್ತದೆ ಎಂದರೆ ಹೌದು. ಈಗ ನನ್ನನ್ನು ಗುತ್ತಿಗೆ ಆಧಾರದ ಮೇಲೆ Electrical contractor ಆಗಿ ಕೆಲಸಕ್ಕೆ ತೆಗೆದುಕೊಂಡರೆ ನಾನು ಸ್ವತಂತ್ರವಾಗಿ ಕೆಲಸವನ್ನು ನಿರ್ವಹಿಸುವ ಶಕ್ತಿ ನನಗೆ ಇರುತ್ತದೆ ಎಂದರೆ ಹೌದು.

Electrical ಕೆಲಸ ಮಾಡುತ್ತಿರುವವರ ಕಾರ್ಮಿಕರ ಕೆಲಸ project ಕೆಲಸ ಮುಗಿದ ತಕ್ಷಣ ಮುಕ್ತಾಯಗೊಳ್ಳುತದೆ ಎಂದರೆ ಸರಿಯಲ್ಲ.

2 ನೇ ಪಕ್ಷಗಾರರ ಸಂಖ್ಯೆ-2 ಸಂಸ್ಥೆಯಲ್ಲಿ ಕೆಲಸ ಮುಗಿದಿದ್ದ ಕಾರಣ ನನ್ನನ್ನು Hitachi ಸಂಸ್ಥೆಗೆ ವರ್ಗಾವಣೆ ಮಾಡಿದ್ದರು ಆದರೂ ಸಹಾ ನಾನು ಅಲ್ಲಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿಗೆ ನಾವು ಹೋಗಿದ್ದೇವು ಆದರೆ ಗುತ್ತಿಗೆ ಮುಕ್ತಾಯಗೊಂಡಿರುತ್ತದೆ ಎಂದು ಹೇಳಿ ನಮಗೆ ತಿಳಿಸಿ ನಮನ್ನು ವಾಪಸ್ಸು ಕಳುಹಿಸಿರುತ್ತಾರೆ ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಖ್ಯೆ-2 ಮತ್ತು Hitachi ಸಂಸ್ಥೆಯ ನಡುವೆ ಆಗಿದ್ದ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರು ನನ್ನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡು ಯಾವುದೇ ನೇಮಕಾತಿ ಪತ್ರ ಕೊಡಿಲ್ಲ ಎಂದರೆ ಸರಿ. ಆದ್ದರಿಂದ 2 ನೇ ಪಕ್ಷಗಾರರ ಸಂಖ್ಯೆ-1 ರವರು ನಮನ್ನು ಕೆಲಸದಿಂದ ತೆಗೆಯುವ ಪ್ರಮೇಯ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ 2 ನೇ ಪಕ್ಷಗಾರರ ಸಂಖ್ಯೆ-1 ರವರ ನಡುವೆ ಮಾಲೀಕ ಹಾಗೂ ನೌಕರರ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**